ಶ್ರೀ ಟಿ.ಬಿ ಜಯಚಂದ್ರ. ಸದನ ಮುಗಿದ ಮೇಲೆಯೂ ಕಳುಹಿಸಿ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್· ಸದನ ಮುಗಿದ ಮೇಲೆಯೂ ಹೋಗುವುದಿಲ್ಲ, ಅದಕ್ಕೆ ಈಗ ಹೇಳುತ್ತಿದ್ದೇವೆ

ಶ್ರೀ ಟಿ.ಬಿ.ಜಯಚಂದ್ರ ಆದಷ್ಟು ಕಳುಹಿಸಿ ಕೊಡುತ್ತೇವೆ

ಶ್ರೀ ಆರ್.ಅಶೋಕ ಪ್ರಶ್ನೋತ್ತರ ಸಮಯ ಮುಗಿದ ಮೇಲೆ ನೀವು ಅವಕಾಶ ಮಾಡಿಕೊಡುತ್ತೇನೆಂದು ನೀವೇ ಹೇಳಿರುವುದು. ದಯವಿಟ್ಟು ನಾನು ಶುರು ಮಾಡುತ್ತೇನೆ.

ಅಧ್ಯಕ್ಷರು: ನಾನು ಹೇಳಿರುತ್ತೇನೆ. ಪ್ರಶ್ನೋತ್ತರವಾದ ಮೇಲೆ ಶೂನ್ಯವೇಳೆ ಇದೆ. ಆ ಶೂನ್ಯವೇಳೆ ಮುಗಿದ ನಂತರ ಅವಕಾಶ ಮಾಡಿ ಕೊಡುತ್ತೇನೆ. ಏನು ಹಾಗೆ ಗಡಿಬಿಡಿ ಮಾಡುತ್ತೀರಿ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ವಿಷಯ:– ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು ಕನ್ನಡಿಗರನ್ನು ಅವಹೇಳನ ಮಾಡಿ ಪ್ರಚೋದನಾತ್ಮಕವಾಗಿ ಭಾಷಣ ಮಾಡಿರುವ ಬಗ್ಗೆ

*****

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಅಧ್ಯಕ್ಷರೆ, ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು ಕನ್ನಡಿಗರನ್ನು ಅವಹೇಳನ ಮಾಡಿ ಪ್ರಚೋದನಾತ್ಮಕವಾಗಿ ಭಾಷಣ ಮಾಡಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ

ಅಧ್ಯಕ್ಷರು: ಮಾನ್ಯ ದತ್ತಾರವರೆ, ಅಷ್ಟೆ ಸಾಕು, ನಾವು ಕರ್ನಾಟಕದವರು, ನಮಗೆ ಸಂಯಮ, ಸಹನೆ ಇದೆ. ಸಂಸ್ಕೃತಿ ಬಂದಿದೆ.

ಶ್ರೀ ವೈ.ಎಸ್ ವಿ. ದತ್ತಾ: ಸರ್ಕಾರ ಉತ್ತರ ಕೊಟ್ಟರೆ ನನ್ನದೇನೂ ಇಲ್ಲ. ಆ ಶಾಸಕರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಈ ಸರ್ಕಾರಕ್ಕೆ ಅವಮಾನ ಮಾಡಿದ್ದಾರೆ.

ಅಧ್ಯಕ್ಷರು: ಕರ್ನಾಟಕದ ಸಂಸ್ಕೃತಿಗೆ ಯಾವುದೇ ರೀತಿಯ ಭಂಗ ಬಾರದ ರೀತಿಯಲ್ಲಿ ನಾವು ವ್ಯವಹರಿಸಬೇಕಾದದ್ದು ತೀರಾ ಅಗತ್ಯವಿದೆ ಯಾರೋ ಏನೋ ಹೇಳುತ್ತಾರೆ ಎಂದು ಅದನ್ನು ಬೃಹದಾಕಾರವಾಗಿ ಬೆಳೆಸುವುದಕ್ಕೆ ಹೋದರೆ ಮತ್ತಷ್ಟು ಹದಗೆಡುತ್ತದೆ

ಶ್ರೀ. ವೈ ಎಸ್.ವಿ. ದತ್ತಾ: ಕನ್ನಡಿಗರ ಮೇಲೆ ಹಾಕಿರುವ ಕೇಸ್ ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಅದನ್ನು ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ದತ್ತಾರವರೆ, ಹೇಳಿಕೆ ಬಗ್ಗೆ ಹೇಳಿದ್ದೀರಿ, ಯಾವುದಾದರೂ ನಿಯಮದ ಅಡಿಯಲ್ಲಿ ತಂದರೆ ಚರ್ಚೆ ಮಾಡಬಹುದು. ಚರ್ಚೆ ಮಾಡುವುದರ ಮುಖೇನ ವ್ಯಾಪಕವಾಗಿ ಬೆಳಕನ್ನು ಚೆಲ್ಲಲು ಸಾಧ್ಯವಾಗುತ್ತದೆ. ಈಗಾಗಲೇ ಮಾನ್ಯ ಅಧ್ಯಕ್ಷರು ಆದೇಶ ಕೊಟ್ಟಿರುವುದರಿಂದ ಅದನ್ನು ಅಷ್ಟೊಂದು ದೊಡ್ಡದಾಗಿ ಬೆಳೆಸುವಂತಹ ಅವಶ್ಯಕತೆ ಇಲ್ಲ.

ಅಧ್ಯಕ್ಷರು: ಶ್ರೀಮತಿ ಶಾರದ ಪೂರ್ಯನಾಯ್ಕ ರವರು ಮಾತನಾಡುವುದು.

(2) ವಿಷಯ: ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ವ್ಯಾಪ್ತಿಗೆ ಸಂಬಂಧಪಟ್ಟ ಬಗರ್‌ಹುಕುಂ ಸಾಗುವಳಿದಾರರ ಮತ್ತು ಅರಣ್ಯ ಸಮಸ್ಯೆಗಳ ಹಾಗೂ ಕೃಷಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಬೃಹತ್ ಸಮಾವೇಶ ನಡೆಸಿರುವ ಬಗ್ಗೆ.

*****